**ದಿನಾಂಕಃ 07.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ವಿ.ವಿ. ಅವರಿಂದ–**

9. ಈಗ ನನಗೆ ತೋರಿಸಿದ ಫೋಟೋದಲ್ಲಿರುವ ವ್ಯಕ್ತಿ ನಾನೇ ಎಂದರೆ ಮೊದಲು ಯಾರು ಎಂದು ಕಾಣುತ್ತಿಲ್ಲ ಎಂದು ನುಡಿದು, ನಂತರ ಅದು ನಾನಲ್ಲ ಎಂದು ನುಡಿಯುತ್ತಾರೆ. ಈಗ ನನಗೆ ತೋರಿಸಿದ ಫೋಟೋ ನನಗೆ ಚೆನ್ನಾಗಿ ಕಾಣುತ್ತಿದೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ಇನ್ನೊಂದು ಫೋಟೋದಲ್ಲಿ ರೋಲಿಂಗ್ ಶೆಟ್ಟರ್ ಅನ್ನು ತೆರೆಯುತ್ತಿರುವ ವ್ಯಕ್ತಿ ನಾನೇ ಎಂದರೆ ಸರಿಯಲ್ಲ. ಇನ್ನೊಂದು ಫೋಟೋದಲ್ಲಿ ಕಾಣುತ್ತಿರುವ ಎಲ್ಲೊ ಬೋರ್ಡ್ ಇನ್ನೋವ ಕಾರ್ ನನ್ನದೆ ಎಂದರೆ ಸರಿಯಲ್ಲ. ನನ್ನ ಹತ್ತಿರ ಕಾರ್ ಇಲ್ಲ. ನನ್ನಲ್ಲಿ ಎಲ್ಲೊ ಬೋರ್ಡ್ ಇನ್ನೋವ ಕಾರ್ ಇದೆ ಎಂದರೆ ಸರಿ. ಫೋಟೋದಲ್ಲಿ ಕಾಣುತ್ತಿರುವ ಕಾರು ನನ್ನದೆ ಆಗಿದ್ದು ಅದನ್ನು ಫೋಟೋದಲ್ಲಿ ನಾನು ಒರೆಸುತ್ತಿದ್ದೇನೆ ಎಂದರೆ ಅದು ನಾನಲ್ಲ.

10. ನನಗೆ ಮೊದಲು ತೋರಿಸಿದ ಫೋಟೋದಲ್ಲಿ ಕಾಣುತ್ತಿರುವ ವಿಳಾಸದಲ್ಲೆ ನನ್ನ ವಾಸದ ಮನೆ ಇದೆ ನನಗೆ ಲೀಗಲ್ ನೋಟೀಸ್ ಸದರಿ ವಿಳಾಸಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ನನಗೆ ಬಂದಿದ್ದ ನೋಟೀಸ್ಗೆ ನನ್ನ ವಕೀಲರ ಮೂಲಕ ಎದುರುದಾರರ ವಕೀಲರಿಗೆ ಉತ್ತರ ನೀಡಿರುತ್ತೇನೆ ಎಂದರೆ ಸರಿ. ಅದರ ಪ್ರತಿಯನ್ನು ಎದುರುದಾರರ ಶಾಲೆಯ ವಿಳಾಸಕ್ಕೂ ಕಳುಹಿಸಿದ್ದೆ ಎಂದರೆ ಸರಿ. ನನಗೆ ನೋಟೀಸ್ ತಲುಪಿದ ವಿಳಾಸಕ್ಕೆ ನ್ಯಾಯಾಲಯದ ಸಮನ್ಸ್ ಕೂಡ ಬಂದಿತ್ತು ಎಂದರೆ ಸುಳ್ಳು.

11. ನಾನು ಚೆಕ್ ಬೌನ್ಸ್ ಕೇಸುಗಳನ್ನು ಇತರರ ವಿರುದ್ಧ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣವನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕರಣಕ್ಕೆ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಎದುರುದಾರರಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ MC ಪ್ರಕರಣದಲ್ಲಿ ಗೈರುಹಾಜರಾಗಿ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.